

ನಂದಾದೀಪ

ವಿದ್ಯಾರ್ಥಿಗಳಲ್ಲಿ ಸತತವಾಗಿ ನೈತಿಕ ಸ್ಥೈರ್ಯ ತುಂಬಿ, ವೃತ್ತಿಬದುಕು ಪ್ರಾರಂಭಿಸಲು ಅಗತ್ಯ ಧನಸಹಾಯದ ದಾರಿಯನ್ನೂ ತೋರುತ್ತಿದ್ದ ಘನ ವ್ಯಕ್ತಿತ್ವ ಗಿರೀಶ ಅವರದು...

# ನಾ ಮೆಚ್ಚಿದ ಗಿರೀಶರ ಮೂರು ಗುಣಗಳು

**ನಾಸಿರುದ್ದೀನ್ ಶಾ**

ಗಿರೀಶರ ಕುರಿತು ನಾನು ಬಲ್ಲ ಸಂಗತಿಗಳನ್ನು ಹಂಚಿಕೊಳ್ಳುವುದು ಹೆಮ್ಮೆಯ ಸಂಗತಿ. ಗಿರೀಶರ 'ತುಘಲಕ್'ನ ಉರ್ದು ಅನುವಾದವನ್ನು 'ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ' (ಎನ್‌ಎಸ್‌ಡಿ) ವಿದ್ಯಾರ್ಥಿಯಾಗಿದ್ದಾಗ 1970ರಲ್ಲಿ ನಾನು ಓದಿದ್ದೆ. ಅದು ಕನ್ನಡದಲ್ಲಿ ಬರೆದದ್ದು ಎನ್ನುವುದೇ ಆಗ ನನಗೆ ಗೊತ್ತಿರಲಿಲ್ಲ. ಉರ್ದುವಿನಲ್ಲಿ ಬರೆದಿರಬೇಕು ಎಂದೇ ಭಾವಿಸಿದ್ದೆ. ಲಖನೋವಿ ಕುರ್ತಾ ತೊಟ್ಟ, ಉದ್ದ ಗಡ್ಡದ, ಕವಿಹೃದಯದ ಜಾಣ ಕನ್ನಡಕಧಾರಿ ಅದನ್ನು ಬರೆದಿರಬೇಕು ಎಂದು ಆಗ ನಾನು ಕಲ್ಪಿಸಿಕೊಂಡಿದ್ದೆ.

ದೆಹಲಿಯ ಥಿಯೇಟರ್‌ನಲ್ಲಿ ಗಿರೀಶರ ಮೇಲೆ ನಾನು ಮೊದಲು ಕಣ್ಣು ಕೀಲಿಸಿದ್ದು; ಪ್ರತ್ಯಕ್ಷವಾಗಿ ಅಲ್ಲ, ತೆರೆಯ ಮೇಲೆ. ಜಾಹೀರಾತಿನಲ್ಲಿ ಅವರು ಠಾಕುಠೀಕು ಸೂಟು ಧರಿಸಿದ್ದರು. ಆದರೆ, ಅವರು ಆ ಗೆಟಪ್‌ನಲ್ಲಿ ಆರಾಮಾಗಿದ್ದಾರೆ ಎನಿಸಿರಲಿಲ್ಲ. ಮೇಲಿನ ತುಟಿಗೆ ತುಸುವೇ ಮೇಲ್ಭಾಗದಲ್ಲಿ ಅಂಟಿಕೊಂಡಿದ್ದ ಮೀಸೆ ಹೊತ್ತು ನಟಿಸಲು ಹೆಣಗುತ್ತಿದ್ದುದು ಸ್ಪಷ್ಟವಾಗಿತ್ತು. ಆನಂತರದ ಕೆಲವು ವರ್ಷಗಳಲ್ಲಿ ನನಗೂ ಆ ರೀತಿ ಅಂಟಿದ ಮೀಸೆ ಹೊತ್ತು ನಟಿಸುವುದು ಕಷ್ಟವೇ ಆಗಿತ್ತೆನ್ನಿ. ರೇಮಂಡ್ಸ್ ತರಹದ ಯಾವುದೋ ಜಾಹೀರಾತು ಅದಿರಬೇಕು. ಯುವತ್ವದ ಬೀಸಿನಲ್ಲಿ ಅಂಥದೊಂದು ಯತ್ನಕ್ಕೆ ಕೈಹಾಕಿದ್ದಾಗಿ ಆಮೇಲೆ ಗಿರೀಶ್ ನನ್ನಲ್ಲಿ ಹೇಳಿಕೊಂಡಿದ್ದರು. ಆ ಜಾಹೀರಾತು ಬಂದಾಗ ನನ್ನ ಪಕ್ಕದಲ್ಲಿ ಕೈಹಿಡಿದು ಕುಳಿತಿದ್ದ ಗರ್ಲ್‌ಫ್ರೆಂಡ್, 'ಓ ಗಿರೀಶ್ ಕಾರ್ನಾಡ್... ವಾಟ್ ಎ ಗಾಡ್ಜಿಯಸ್ ಲುಕಿಂಗ್ ಮ್ಯಾನ್' ಎಂದು ಉದ್ಗರಿಸಿದ್ದಳು. ಆಮೇಲೆ ಆ ಅವತಾರದಲ್ಲಿ ಗಿರೀಶರನ್ನು ನಾನು ನೋಡಲೇ ಇಲ್ಲ.

ಈ ಮನುಷ್ಯನೇ ನಾಟಕ ಬರೆದವನಾ? ಇಲ್ಲಿ ಏನೋ ಸಮಸ್ಯೆ ಇದೆ ಎಂದು ನನಗೆ ಆಗ ಅನ್ನಿಸಿತ್ತು. ಆಮೇಲೆ ಗಿರೀಶರು ಮಾತನಾಡುವುದನ್ನು ಕಂಡೆ. ಅದು ಡ್ರಾಮಾ ಸ್ಕೂಲ್‌ನ ಸೆಮಿನಾರ್. ಸೂಟು ಮಾಯವಾಗಿತ್ತು. ಕಡುಗೆಂಪು ಬಣ್ಣದ ಸೊಗಸಾದ ಕುರ್ತಾ ಮೈಮೇಲಿತ್ತು. ಗಾಂಭೀರ್ಯಕ್ಕೆ ಗಡ್ಡ. ಗುಂಗುರು ಕೂದಲು. ಇಡೀ ಕೋಣೆಯನ್ನು ಆವರಿಸುವಂಥ ಶಾರೀರ. ಸ್ವಚಿಂತನೆಗಳಲ್ಲಿ ಬಲು ಸ್ಪಷ್ಟತೆ. ಅದನ್ನು ದಾಟಿಸಲು ಬಳಸಿದ್ದ ಮಾರ್ಗ ಕೂಡ ಗಮನಾರ್ಹ. ಕಣ್ಣುಗಳಲ್ಲಿ ಭರಪೂರ ಆತ್ಮವಿಶ್ವಾಸ. ಆ ದಿನ ಅಲ್ಲಿ ಅನೇಕ ಸೆಲೆಬ್ರಿಟಿಗಳು ಇದ್ದರೂ ನನ್ನನ್ನು ಹಿಡಿದಿಟ್ಟಿದ್ದು ಗಿರೀಶರೇ. ಕೆಲವು ವರ್ಷಗಳ ನಂತರ